

## ಬೊಗಸೆಗೆ ಸಿಕ್ಕ ಸಗ್ಗ

ಭಾರತದ ಅತ್ಯಂತ ದೊಡ್ಡ ಚೈತ್ಯಗೃಹವುಳ್ಳ ಗುಹೆ ಎಂದೇ ಹೆಸರಾಗಿರುವ ಕಾರ್ಲಾ, ತನ್ನೊಳಗೆ ಸುಮಾರು 15 ಪುಟ್ಟ ಪುಟ್ಟ ಗುಹೆಗಳನ್ನು ಬಚ್ಚಿಟ್ಟುಕೊಂಡಿದೆ. ಒಂದನೇ ಶತಮಾನದಲ್ಲಿ ನಿರ್ಮಿತವಾಗಿದೆ ಎನ್ನಲಾದ ಈ ಗುಹೆಯ ಕೆತ್ತನೆ ಕೆಲಸ ನಾಲ್ಕನೇ ಶತಮಾನದಲ್ಲಿ ನಡೆಯಿತೆಂದು ಇತಿಹಾಸ ಹೇಳುತ್ತದೆ. ಶಾತವಾಹನರ ಸಹಾಯದಿಂದ ಇದನ್ನು ಕಟ್ಟಲಾಯಿತಂತೆ. ಗುಹೆಯನ್ನು ದೊಡ್ಡ ದೊಡ್ಡ ಬಂಡೆಗಲ್ಲುಗಳಿರುವಲ್ಲಿಯೇ ನಿರ್ಮಿಸಲಾಗಿದ್ದು ಎಲ್ಲವೂ ನೈಸರ್ಗಿಕ ಕಲ್ಲುಗಳಿಂದಲೇ ರಚನೆಗೊಂಡಿವೆ. ಹಾಗಾಗಿ ಇದಕ್ಕೊಂದು ಅಸದೃಶವಾದ ಚೆಲುವಿದೆ.

ಗುಹೆಯ ಒಂದು ಬದಿಯಲ್ಲಿ ತಾಗಿ ನಿಂತಿರುವ ಏಕವೀರ ದೇವಿಯ ದೇವಸ್ಥಾನ ಇಲ್ಲಿನ ಜನರಿಗೆ ಧಾರ್ಮಿಕ ಆಕರ್ಷಣೆ. ನವರಾತ್ರಿಯ ಹೊತ್ತಿಗಂತೂ ಈ ದೇಗುಲದಲ್ಲಿ ನವ ವೈಭವವೇ ಸೃಷ್ಟಿಯಾಗಿಬಿಡುತ್ತದೆ. ಆದರೆ ಇತಿಹಾಸ ಕುತೂಹಲಿಗಳಿಗೆ ಇಲ್ಲಿ ಗುಹೆ ನೋಡುವುದೇ ದೊಡ್ಡ ಹಿಗ್ಗು. ಗೋಡೆಗಳಲ್ಲಿ, ಛಾವಣಿಯಲ್ಲಿ, ದ್ವಾರಗಳಲ್ಲಿ ನಿಜವಾದ ಜೀವ ಪಡೆದುಕೊಂಡು ನಿಂತಂತಿರುವ ದೇವದೇವತೆಗಳು, ಆನೆ, ಹಂಸ, ಮರ, ಬಳ್ಳಿ, ಹಕ್ಕಿ ಮೊದಲಾದ ಶಿಲ್ಪಗಳನ್ನು ಮನದಣಿಯೇ ನೋಡುತ್ತ, 'ಆಹಾ ಈ ಶಿಲ್ಪವೋ? ಇದನ್ನು ಕೆತ್ತಿದ ಆ ಶಿಲ್ಪಿಯೋ?!' ಎಂದು ಅಚ್ಚರಿಯಿಂದ ಹೊಗಳಿಕೆಯ ಉದ್ಗಾರ ತೆಗೆದು, ಆ ಶಿಲ್ಪಗಳನ್ನು ಕೈಯಾರೆ ಮುಟ್ಟಿದಾಗ ನಮ್ಮಂತಹವರಿಗೆ ಸ್ವರ್ಗವೇ ಬೊಗಸೆಗೆ ಬಂದಷ್ಟು ಧನ್ಯತೆ.



ಇಲ್ಲಿರುವ ಮನಮೋಹಕ ಸ್ತೂಪವೇ ಬೌದ್ಧರಿಗೆ ಆರಾಧನೆಯ ಮುಖ್ಯ ಕೇಂದ್ರಬಿಂದು. ಬೌದ್ಧಗುರುಗಳು ಹಿಂದೆ ಈ ಗುಹೆಯಲ್ಲಿಯೇ ಧ್ಯಾನಕ್ಕೆ ಕುಳಿತುಕೊಳ್ಳುತ್ತಿದ್ದರಂತೆ. ಇಲ್ಲಿಂದ ಹೊರಗೆ ಬರುವುದೇ ಬೇಡ, ಇಲ್ಲೇ ಕೂತುಬಿಡುವ ಎನ್ನುವಷ್ಟು ಇಲ್ಲಿ ಶಾಂತಿಯಿದೆ, ಪಾಸಿಟಿವ್ ಕಂಪನವಿದೆ.

ಮುಖ್ಯ ಗುಹೆಯ ಚೆಲುವನ್ನು ಕಣ್ತುಂಬಿಕೊಂಡು ಇನ್ನೂ ಒಂದಷ್ಟು ಗುಹೆಗಳಿರುವ ಆವರಣದೊಳಗೆ ಹೊಕ್ಕಾಗ ವಿಶಾಲವಾದ ಕಲ್ಲಿನ ಜಗಲಿ ಎದುರಾಯಿತು. ಆ ಜಗಲಿಯ ಒಂದು ಭಾಗದಲ್ಲಿ ಕಡಿದಾದ ಮೆಟ್ಟಿಲುಗಳನ್ನೇರಿದಾಗ ಮತ್ತೊಂದು ಮಹಡಿ ಬಾ ಬಾ ಎಂದು ಕರೆಯಿತು. ಅದರೊಳಗೂ ಒಂದಷ್ಟು ಪುಟ್ಟ ಪುಟ್ಟ ಗುಹೆಗಳ ಜಾಡು. ಎಲ್ಲಾ ಕಡೆಗೆ ಪ್ರವೇಶವಿಲ್ಲ. ಈ ಕಲ್ಲಿನ ಮಹಡಿಯಲ್ಲಿ ಒಟ್ಟು ಎಂಟು ಕೋಣೆಗಳಿದ್ದು ಎಲ್ಲಾ ಕೋಣೆಗಳಲ್ಲೂ ನೈಸರ್ಗಿಕ ಬೆಳಕಷ್ಟೇ ಪಸರಿಸಿಕೊಂಡು ಉಳಿದಂತೆ ಕತ್ತಲೆಯೇ ಈ ಗುಹೆಯನ್ನು ಇನ್ನಷ್ಟು ನಿಗೂಢತೆಯತ್ತ ಎಳೆದುಕೊಂಡು ಹೋಗುತ್ತದೆ.

ಇಲ್ಲಿನ ಕಲ್ಲುಗಳಲ್ಲಿ ಧ್ಯಾನಸ್ಥ ಭಂಗಿಯಲ್ಲಿ ಕೂತ ಬುದ್ಧನ ಬಳಿ, 'ನಿನ್ನೊಳಿರುವ ಶಾಂತಿ ನಮ್ಮೆಡೆಗೆ ಬರಲಿ' ಎಂದು ಮೊರೆಯಿಡುತ್ತ ಕೂತುಬಿಡಬೇಕು ಅನ್ನಿಸಿಬಿಡುತ್ತದೆ. ಹಾಗೇ ಬುದ್ಧನನ್ನು ನಮ್ಮೊಳಗೆ ಇಳಿಸಿಕೊಳ್ಳುತ್ತ ಮಹಡಿಯ ಪುಟ್ಟಪುಟ್ಟ ಕಿಟಕಿಗಳಲ್ಲಿ ಕಣ್ಣು ನೆಟ್ಟಾಗ ಮಹಾರಾಷ್ಟ್ರದ ಹಳ್ಳಿಗಳ ಮಳೆಗಾಲದ ಸಕಲ ಚೆಲುವು ಜಿಟಿಜಿಟಿ ಮಳೆಯ ಹಿನ್ನೆಲೆಯಲ್ಲಿ ಆ ಕಿಟಕಿಯಿಂದ ಕನಸಿನಂತೆ ತೆರೆದುಕೊಂಡಿತು. ಹೊರಗೆ ಮಳೆ ಬಂದು ಥಂಡಿ ಥಂಡಿ ಅನ್ನಿಸಿದರೆ, ಗುಹೆಯೊಳಗೆ ಕೊಂಚ ಬಿಸಿ, ಕೊಂಚ ಥಂಡಿ, ಕೊಂಚ ಬೆಳಕು, ಕೊಂಚ ಕತ್ತಲುಗಳ ಸಮ್ಮಿಶ್ರ ಅನುಭೂತಿ.

ಸುತ್ತಲೂ ಹಸುರ ಸೌಂದರ್ಯದ, ಮೌನದ ದೆಸೆಯಿಂದ ಈ ಗುಹೆಯಲ್ಲಿ ಅದಮ್ಯವಾದ ಶಾಂತಿ ಇದೆ. ಬದುಕಿನ ಸೌಂದರ್ಯವೆಲ್ಲಾ ಈ ಗುಹೆಯ ಬಗಲಲ್ಲಿ ಸಿಕ್ಕಿತೆನ್ನುವ ಧನ್ಯತೆ ಆವರಿಸುತ್ತದೆ. ಬಹುಶಃ ಆ ಕಾಲದಲ್ಲಿ ಬೌದ್ಧ ಸನ್ಯಾಸಿಗಳು ನಿಸರ್ಗ ಸಹಜತೆ ಇದೆ, ಅಪರಿಮಿತವಾದ ಶಾಂತಿಯಿದೆ ಎನ್ನುವ ಕಾರಣಕ್ಕೆ ಇಲ್ಲಿ ನೆಲೆ ನಿಂತಿದ್ದರೇನೋ? ಗುಹೆಯ ನಿಗೂಢವನ್ನು, ಗುಹೆ ಸ್ವಲ್ಪ ಬಚ್ಚಿಡುತ್ತಲೇ, ಸ್ವಲ್ಪ ಸ್ವಲ್ಪವೇ ಬಿಚ್ಚಿಡುತ್ತಿದ್ದ ಚೆಲುವು ಮತ್ತು ಅದರ ಪಿಸುಮಾತುಗಳನ್ನೆಲ್ಲಾ ಅನುಭವಿಸುತ್ತ ನಾವು ಸಮಯ ಕಳೆದವು.

ಕಟ್ಟಕಡೆಗೆ ಗುಹೆಯ ಎದುರಿನ ಆವರಣಕ್ಕೆ ಬಂದು ಇಡೀ ಗುಹೆಯ ವಿಶಾಲತೆಯನ್ನು ಮತ್ತೆ ಬೆರಗಿನಿಂದ ನೋಡುತ್ತ ನಿಂತಾಗ, ಮಳೆ ಮತ್ತೆ ಪಿರಿಪಿರಿ ಎನ್ನಲು ಶುರುವಾಯ್ತು. ಗುಹೆಯ ಕಲ್ಲುಗಳ ಮೇಲೆ ಮಳೆ ಹನಿಗಳೆಲ್ಲಾ ಮುನ್ನುಗ್ಗುತ್ತಾ, 'ಹೇ ಗುಹೆಯೇ, ನಮಗೂ ನಿನ್ನೊಡನೆ ಸೇರಿ ಇತಿಹಾಸವಾಗಬೇಕು, ಶಿಲ್ಪವಾಗಬೇಕು' ಎಂದಾಗ, ಗುಹೆ ಸಣ್ಣಗೆ ನಕ್ಕು 'ಬಾ ಮಳೆಯೇ ಬಾ' ಎಂದ ಹಾಗಾಯಿತು.

ಪ್ರತಿಕ್ರಿಯಿಸಿ: feedback@sudha.co.in